ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-570017
ವೆಬ್ ಸೈಟ್:
www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ eys. 193 ದಿನಾಂಕ: 07.01.2019

## -: ಜನ ಸಂಪರ್ಕ ಸಭೆಯ ನಡಾವಳಿ :-

ದಿನಾಂಕ: 14.12.2018. ರಂದು ಕೊಳ್ಳೇಗಾಲ ಉಪವಿಭಾಗ ಕಛೇರಿಯ ಆವರಣದಲ್ಲಿ ತ್ರೈಮಾಸಿಕ ಜನ ಸಂಪರ್ಕ ಸಭೆಯನ್ನು ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ ಚಾವಿಸನಿನಿ ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳ ಸಮಕ್ಷಮದಲ್ಲಿ ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದವರು:-**

| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ. ಉಮೇಶ್ ಬಿ.ಎಸ್ | ಅಧೀಕ್ಷಕಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ |
| 2 | ಶ್ರೀಮತಿ ತಾರಾ | ಕಾರ್ಯನಿರ್ವಾಹಕಇಂಜಿನಿಯರ್(ವಿ),ಚಾಮರಾಜನಗರ-ಕೊಡಗು ವೃತ್ತ |
| 3 | ಶ್ರೀ.ಪ್ರದೀಪ್ ಟಿ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೊಳ್ಳೇಗಾಲ |
| 4 | ಶ್ರೀ. ರಾಜಯ್ಯನ್ | ಲೆಕ್ಕಾಧಿಕಾರಿಗಳು ಕೊಳ್ಳೇಗಾಲ ವಿಭಾಗ |
| 5 | ಶ್ರೀ. ಎಸ್.ಲಿಂಗರಾಜು | ಸ.ಕಾ.ನಿ.ಇಂ(ವಿ), ಕೊಳ್ಳೇಗಾಲ ಉಪ-ವಿಭಾಗ |
| 6 | ಶ್ರೀ.ಪ್ರದೀಪ್ ಕುಮಾರ | ಸಹಾಯಕ ಇಂಜಿನಿಯರ್(ವಿ),ಕೊಳ್ಳೇಗಾಲ ಶಾಖೆ |
| 7 | ಶ್ರೀ.ಸುಧಾಕರ್ ಕೊಟಗೊಂಡ | ಸಹಾಯಕ ಇಂಜಿನಿಯರ್(ವಿ),ಕೊಳ್ಳೇಗಾಲ ಶಾಖೆ |
| 8 | ಶ್ರೀ.ಪಣೀಶ್ ಬಾಬು.ಬಿ | ಕಿ.ಇಂ(ವಿ), ಚಿಲಕವಾಡಿ ಶಾಖೆ |
| 9 | ಶ್ರೀ.ಆರ್. ರವಿಕುಮಾರ್ | ಪ್ರ.ಕಿ.ಇಂ (ವಿ) ದೊಡ್ಡಿಂದುವಾಡಿ ಶಾಖೆ |
| 10 | ಶ್ರೀ ಜಮೀಲ್ ಅಹಮ್ಮದ್ | ಪ್ರ.ಕಿ.ಇಂ (ವಿ) ಸತ್ತೇಗಾಲ ಶಾಖೆ |

| ಕ್ರಮ ಸಂಖ್ಯೆ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರುಗಳು | ತೆಗೆದುಕೊಂಡ ಕ್ರಮ |
|---|---|---|---|
| 1 | ರವೀಂದ್ರನಾಥ್ | * ನನ್ನತಂದೆ ಮರಣ ಹೊಂದಿದ್ದ ನಂತರ ನನ್ನ ಹೆಸರಿಗೆ ವಿದ್ಯುತ್ ಸ್ಥಾವರದ ಆರ್.ಆರ್. ಸಂಖ್ಯೆಯನ್ನು ವರ್ಗಾಹಿಸಲು ಇಂಡಿಮಿನೆಂಟ್ ಬಾಂಡ್ ಕೇಳುತ್ತಿರುವ ಕುರಿತು. | * ಇಂಡಿಮಿನೆಂಟ್ ಬಾಂಡ್‌ನ್ನು ಪಡೆದುಕೊಳ್ಳುವಂತೆ KERC ಯಲ್ಲಿ ನಿರ್ದೇಶನವಿರುವುದರಿಂದ ಇಂಡಿಮಿನೆಂಟ್ ಬಾಂಡ್‌ನ್ನು ಸಲ್ಲಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿಯವರಿಗೆ ಸೂಚಿಸಿದರು. |
| 2 | ನಾಗಣ್ಣ, ಭೀಮನಗರ, ಕೊಳ್ಳೇಗಾಲ | * ಜನಸಂಪರ್ಕ ಸಭೆಯ ದಿನಾಂಕವನ್ನು ಟಾಂ ಟಾಂ ಮೂಲಕ ಪ್ರಚಾರ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸದಿರುವ ಕಾರಣ ಸಭೆಯನ್ನು ರದ್ದು ಪಡಿಸಿ ಎಂದು ಕೇಳಿದರು, * Resolution copy ಯನ್ನು ನೀಡುವಂತೆ ಕೋರಿದರು | * ಜನಸಂಪರ್ಕ ಸಭೆಯನ್ನು ದಿನ ಪತ್ರಿಕೆಗಳಲ್ಲಿ ಮತ್ತು ಸೂಚನಾ ಫಲಕ ಮುಖಾಂತರ ಪ್ರಚಾರ ಮಾಡುವಂತೆ KERC ನಿಯಮ ಇರುವುದರಿಂದ ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ಹಾಗೂ ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸಲು ಅನುಕೂಲವಾಗುವಂತೆ ಗ್ರಾಮ ಪಂಚಾಯಿತಿಯ ಕಛೇರಿಯ ಸೂಚನಾ ಫಲಕಗಳಲ್ಲಿಯೂ ಸಹ ಪ್ರಕಟಿಸಲಾಗುವುದು ಎಂದು ತಿಳಿಸಲಾಯಿತು. * Resolution copy ಯನ್ನು ನಮ್ಮ ಇಲಾಖೆ ವತಿಯಿಂದ ನೀಡಲು ಬರುವುದಿಲ್ಲ ಎಂದು ತಿಳಿಸಲಾಯಿತು. |
| 3 | ಕೃಷ್ಣರಾಜು, ಭೀಮನಗರ, ಕೊಳ್ಳೇಗಾಲ | | |
| 4 | ರಮೇಶ್, ಭೀಮನಗರ, ಕೊಳ್ಳೇಗಾಲ | | |

| | | | |
|---|---|---|---|
| 5 | ಕೆ.ಎಸ್.ಸತೀಶ್ | * ಚರಂಡಿಯಲ್ಲಿ ಕಂಬಗಳು ಇರುವುದನ್ನು ಹೊರಗಡೆ ಹಾಕುವ ಬಗ್ಗೆ | * ಈ ಹಿಂದೆಯೇ ನಿಗಮದ ವತಿಯಿಂದ ರಸ್ತೆಯ ಪಕ್ಕದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿದ್ದು, ಇತ್ತೀಚೆಗೆ ನಗರಸಭೆಯವರು ವಿದ್ಯುತ್ ಕಂಬಗಳನ್ನೊಳಗೊಂಡಂತೆ ಚರಂಡಿ ನಿರ್ಮಾಣ ಮಾಡಿರುವುದರಿಂದ ಸದರಿ ಚರಂಡಿಯಲ್ಲಿರುವ ಕಂಬಗಳನ್ನು ನಿಗಮದ ವತಿಯಿಂದ ಸ್ಥಳಾಂತರಿಸಲಾಗುವುದಿಲ್ಲ ಇದಕ್ಕೆ ಸಂಬಂಧಪಟ್ಟ ನಗರಸಭೆಯವರ ಗಮನಕ್ಕೆ ತರುವುದು ಎಂದು ಸಭೆಯಲ್ಲಿ ತಿಳಿಸಲಾಯಿತು. |
| 6 | ರವಿ, ಕಾಮಗೆರೆ | * ದೊಡ್ಡಿಂದುವಾಡಿಯಲ್ಲಿ ಮಳೆ ಬಂದಾಗ ಪ್ರತಿ ಸಾರಿ ಕರೆಂಟ್ ಇರುವುದಿಲ್ಲ, ಮರಗಿಡಗಳನ್ನು ಕತ್ತರಿಸಲು ಸೂಚಿಸಿದರು. | * ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಲಾಯಿತು. |
| 7 | ರಾಜಶೇಖರ್, ಸತ್ತೇಗಾಲ | * ಸತ್ತೇಗಾಲ ಶಾಖೆಯ ಶಾಖಾಧಿಕಾರಿಗಳು ದೂರವಾಣಿ ಕರೆಯನ್ನು ಸ್ವೀಕರಿಸುವುದಿಲ್ಲ ಎಂದು ತಿಳಿಸಿದರು. | * ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ದೂರವಾಣಿ ಕರೆಯನ್ನು ಸ್ವೀಕರಿಸಿ ಗ್ರಾಹಕರ ದೂರುಗಳನ್ನು ಸೌಜನ್ಯಯುತವಾಗಿ ಬಗೆಹರಿಸಲು ಸೂಚಿಸಲಾಯಿತು. |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ. ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

<u>ಪ್ರತಿಯನ್ನು:</u>

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಕೊಳ್ಳೇಗಾಲ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.